ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ, ದಿನಾಂಕ:31-01-2018ರ ನಡವಳಿಗಳು

ವಿಷಯದ ಸಂಖ್ಯೆ: ವಾಕಾಸ್ಥಾಸ/772/2017-18

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಾಸರಹಳ್ಳಿ ವಲಯಕ್ಕೆ ಸೇರಿರುವ ವಾರ್ಡ್-13 ಪಾಲಿಕೆಯ ಆಯವ್ಯಯದ ಲೆಕ್ಕ ಶೀರ್ಷಿಕೆ ಪಿ-3235 ಅನುದಾನದಡಿ ಕಾಮಗಾರಿಗೆ ಅನುವು ಮಾಡಿದ್ದು, ಇದರ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಕ್ರಸ	ಕಾಮಗಾರಿಯ ಹೆಸರು	ಅಂದಾಜು ಮೊತ್ತ ರೂ ಲಕ್ಷಗಳಲ್ಲಿ	ಜಾಬ್ ಸಂಖ್ಯೆ
1	**Construction of mustering center for powrakarmiara at mallasandra Sy.No.33 in ward No.13**	50.00	013-18-000089

ಸದರಿ ಕಾಮಗಾರಿಗೆ ಅಂದಾಜು ಪಟ್ಟಿಯನ್ನು ತಯಾರಿಸಿದ್ದು, ಮುಖ್ಯ ಅಭಿಯಂತರರು (ದಾಸರಹಳ್ಳಿ) ರವರು ಮೆ:ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮುಖೇನ ನಿರ್ವಹಿಸಲು ವರದಿ ಮಂಡಿಸಿರುತ್ತಾರೆ.

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಆಇ/262/ವೆಚ್ಚ-12/17, ದಿನಾಂಕ:22-04-2017 ರಲ್ಲಿ ಸಂಸ್ಥೆಯ ಸರ್ಕಾರದ ಇಲಾಖೆಗಳು ಮತ್ತು ಇತರೆ ಸಂಗ್ರಹಣಾ ಸಂಸ್ಥೆಗಳು ಕರ್ನಾಟಕ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ (ಕೆಆರ್‌ಐಡಿಎಲ್- ಹಿಂದಿನ ಕೆ.ಎಲ್.ಎ.ಸಿ) ಸಂಸ್ಥೆಯ ಮೂಲಕ ಗರಿಷ್ಟ ರೂ.2.00 ಕೋಟಿಗಳ ಮಿತಿಯಲ್ಲಿ ಕೈಗೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ದಿನಾಂಕ:01-04-2017 ರಿಂದ ಒಂದು ವರ್ಷದ ಅವಧಿಗೆ ಷರತ್ತುಗಳಿಗೊಳಪಟ್ಟು ವಿನಾಯಿತಿ ನೀಡಿದೆ.

ಈ ಹಿನ್ನಲೆಯಲ್ಲಿ ವಿಶೇಷ ಆಯುಕ್ತರು (ಯೋಜನೆ) ರವರ ಶಿಫಾರಸ್ಸಿನಂತೆ ಹಾಗೂ ಮಾನ್ಯ ಆಯುಕ್ತರವರ ಆದೇಶದಂತೆ, ವಾರ್ಡ-13 ರಲ್ಲಿ ಪ್ರಸ್ತಾಪಿತ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಮೆ:ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮುಖೇನ ನಿರ್ವಹಿಸಲು ಅನುಮೋದನೆ ಕೋರಿ ಮಾನ್ಯ ಆಯುಕ್ತರು ಸಂಖ್ಯೆ:ಪಿ.ಎಸ್.ಆರ್.(ಜಿ)6787/2017-18,

-1-

Scanned by CamScanner

ದಿನಾಂಕ:4-01-2018ರಂತೆ ಅನುಮೋದಿಸಿರುವ ಮೇರೆಗೆ ಪ್ರಧಾನ ಅಭಿಯಂತರರ ಕಚೇರಿ ಸಂಖ್ಯೆ:10029/2017-18 ದಿನಾಂಕ:12-01-2018 ರಂತೆ ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಪ್ರಧಾನ ಅಭಿಯಂತರರು ರವರ ದಿನಾಂಕ:12-01-2018ರ ಟಿಪ್ಪಣಿ.

ನಿರ್ಣಯ:- ಪ್ರಧಾನ ಅಭಿಯಂತರರವರ ದಿ:12/01/2018ರ ಟಿಪ್ಪಣಿಯ ಕುರಿತು ಬಿಬಿಎಂಪಿ-ಗೆ ಸೇರ್ಪಡೆಗೊಂಡಿಗೆ ಇರುವಿಕೆಯಾಗಿಲ್ಲವು, ತುರ್ತಾಗಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವ ಬಿಬಿಎಂಪಿಗೆ ಇರುವುದಾಗಿ ಟೆಂಡರ್ ಪ್ರಕ್ರಿಯೆ ಮುನ್ನಡೆಯಲಾದ ಹಿನ್ನೆಲೆಯಲ್ಲಿ, ಪ್ರಸ್ತಾವಿತ ಕಾಮಗಾರಿಯನ್ನು ಜೆ: ಕೆ.ಟಿ.ಟಿ.ಪಿ.ಎಲ್. ಸಂಸ್ಥೆಯಿಂದ ವಾಪಸ್ಸು ಪಡೆಯಲು ನಿಯಮಾನುಸಾರ ಕ್ರಮಕೈಗೊಳ್ಳಲು ಆಯುಕ್ತರು ಸೂಚಿಸಿದ್ದಾರೆ ಎಂದು ತಿಳಿಸಲಾಗಿದೆ.

ಅಧ್ಯಕ್ಷರು

ವಾರ್ಡ್‌ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಕ್ರ ಸಂ	ಶ್ರೀಯುತರ ಹೆಸರು	ಪದನಾಮ	ನಿರ್ಣಯದ ಪರವಾಗಿ ಸಹಿ
1	ಇಮ್ರಾನ್ ಪಾಷ	ಅಧ್ಯಕ್ಷರು	
2	ಎಸ್.ಪಿ.ಹೇಮಲತಾ	ಸದಸ್ಯರು	S.P. Hemalatha
3	ದೀಪ ನಾಗೇಶ್	ಸದಸ್ಯರು	Deepanagesh
4	ಶ್ವೇತ ವಿಜಯಕುಮಾರ್	ಸದಸ್ಯರು	Swetha
5	ಹೇಮಲತಾ ಸತೀಶ್. ಶೇಟ್	ಸದಸ್ಯರು	Hshet
6	ಯಶೋಧ ಲಕ್ಷ್ಮೀಕಾಂತ	ಸದಸ್ಯರು	Yashodha.L
7	ನೇತ್ರಾ ಪಲ್ಲವಿ.ಎಂ.	ಸದಸ್ಯರು	Nettrapallavi.M
8	ಹಾನಾ ಭುವನೇಶ್ವರಿ (ಭುವನ)	ಸದಸ್ಯರು	Bhuvana
9	ಸುಜಾತ. ಡಿ.ಸಿ.ರಮೇಶ್	ಸದಸ್ಯರು	Sujatha
10	ಮಂಜುಳ	ಸದಸ್ಯರು	ಮಂಜುಳ
11	ಎಸ್.ಜಿ. ನಾಗರಾಜ್	ಸದಸ್ಯರು	

Scanned by CamScanner